# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧ Part – I | ಬೆಂಗಳೂರು, ಮಂಗಳವಾರ, ೨೧, ಜುಲೈ, ೨೦೨೬ (ಆಷಾಢ, ೩೦, ಶಕವರ್ಷ, ೧೯೪೮) BENGALURU, TUESDAY, 21, JULY, 2026 (ASHADHA, 30, SHAKAVARSHA, 1948) | ನಂ. ೫೪೩ No. 543 |
|---|---|---|


**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ/150/ಎಸ್‌ಎಂಆರ್/2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:21.07.2026

**ಅಧಿಕೃತ ಜ್ಞಾಪನ**

ವಿಷಯ: ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅರ್ಹ ಅವಲಂಬಿತ ಸದಸ್ಯರು ರಸ್ತೆ ಅಪಘಾತ ಪ್ರಕರಣಗಳನ್ನೊಳಗೊಂಡಂತೆ ವೈದ್ಯ-ಕಾನೂನು (Medico-Legal) ಪ್ರಕರಣಗಳಲ್ಲಿ ಪಡೆದ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರನ್ವಯ ಮರುಪಾವತಿಸುವ ಬಗ್ಗೆ ಹಾಗೂ ವೈದ್ಯಕೀಯ ಮುಂಗಡ ಮಂಜೂರು ಮಾಡುವ ಕುರಿತು ಸ್ಪಷ್ಟೀಕರಣ.

***

I. ರಸ್ತೆ ಅಪಘಾತ ಪ್ರಕರಣಗಳನ್ನೊಳಗೊಂಡಂತೆ ವೈದ್ಯ-ಕಾನೂನು (Medico-legal) ಪ್ರಕರಣಗಳಲ್ಲಿ ಸರ್ಕಾರಿ ನೌಕರರು ಪಡೆದ ವೈದ್ಯಕೀಯ ಚಿಕಿತ್ಸೆಗೆ ಭರಿಸಿದ ವೆಚ್ಚಗಳ ಮರುಪಾವತಿಯನ್ನು ಯಾವ ರೀತಿ ಪರಿಗಣಿಸಬೇಕೆಂಬ ಬಗ್ಗೆ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಅರ್ಹ ಸದಸ್ಯರು ವೈದ್ಯಕೀಯ ಚಿಕಿತ್ಸೆಗಳಿಗೆ ಭರಿಸಿದ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಅವಕಾಶವನ್ನು ಕಲ್ಪಿಸಿರುವ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರಲ್ಲಿ ಸ್ಪಷ್ಟತೆ ಇರುವುದಿಲ್ಲವಾದ್ದರಿಂದ, ಇಂತಹ ಪ್ರಕರಣಗಳಲ್ಲಿ ಚಿಕಿತ್ಸಾ ಮೊತ್ತವನ್ನು ಮರುಪಾವತಿಸುವ ಬಗ್ಗೆ ಹಲವಾರು

ಇಲಾಖೆಗಳಿಂದ ಸ್ಪಷ್ಟೀಕರಣ ಕೋರಿ ಪ್ರಸ್ತಾವನೆಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಸ್ವೀಕೃತವಾಗಿರುತ್ತದೆ.

II. ರಸ್ತೆ ಅಪಘಾತಗಳನ್ನೊಳಗೊಂಡಂತೆ ವೈದ್ಯ-ಕಾನೂನು (Medico-legal) ಪ್ರಕರಣಗಳಲ್ಲಿ, ಸಾಮಾನ್ಯವಾಗಿ, ಪ್ರಕರಣ ನಡೆದ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ FIR ದಾಖಲಾಗಿ, ಸಂಬಂಧಪಟ್ಟ ಸಕ್ಷಮ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳು ದಾಖಲ್ಪಟ್ಟ ನಂತರ, ಸಕ್ಷಮ ನ್ಯಾಯಾಲಯಗಳು ವೈದ್ಯಕೀಯ ವೆಚ್ಚ ಒಳಗೊಂಡಂತೆ ಪರಿಹಾರದ ಮೊತ್ತದ ಬಗ್ಗೆ ತೀರ್ಮಾನ / ಆದೇಶ ನೀಡುತ್ತದೆ. ಆದರೆ, ಇಂತಹ ವೈದ್ಯ-ಕಾನೂನು (Medico-legal) ಪ್ರಕರಣಗಳಲ್ಲಿ ಸಕ್ಷಮ ನ್ಯಾಯಾಲಯಗಳಿಂದ ಅಂತಿಮ ಆದೇಶವು ಹೊರಬರಲು ಗಣನೀಯ ಕಾಲಾವಕಾಶ ಬೇಕಾಗುವುದರಿಂದ, ಅಂತಿಮ ತೀರ್ಪು ಅಥವಾ ಆದೇಶಕ್ಕಾಗಿ ಕಾಯದೆ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಕುರಿತಂತೆ ಹಾಗೂ ವೈದ್ಯಕೀಯ ಮುಂಗಡ ಮಂಜೂರು ಮಾಡುವ ಸಂಬಂಧ ಕೆಳಕಂಡಂತೆ ಸರ್ಕಾರವು ಸ್ಪಷ್ಟೀಕರಿಸುತ್ತದೆ:-

## A. ವೈದ್ಯಕೀಯ ವೆಚ್ಚದ ಮರುಪಾವತಿ

(i) ರಸ್ತೆ ಅಪಘಾತಗಳನ್ನೊಳಗೊಂಡಂತೆ ವೈದ್ಯ-ಕಾನೂನು (Medico-legal) ಪ್ರಕರಣಗಳಲ್ಲಿ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅರ್ಹ ಅವಲಂಬಿತ ಸದಸ್ಯರು ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ (empanelled hospital) ಹಾಗೂ ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಗಳ ವೆಚ್ಚವನ್ನು 1963 ರ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳನ್ವಯ ಪೂರ್ವ ಪರಿಷ್ಕೃತ CGHS ದರದನ್ವಯ (2014 ದರದಂತೆ) ಅರ್ಹ ಮೊತ್ತವನ್ನು ಮರುಪಾವತಿಸಬಹುದಾಗಿರುತ್ತದೆ.

(ii) ರಸ್ತೆ ಅಪಘಾತಗಳನ್ನೊಳಗೊಂಡಂತೆ ವೈದ್ಯ-ಕಾನೂನು (Medico-legal) ಪ್ರಕರಣಗಳಲ್ಲಿ, ಘಟನಾ ಸ್ಥಳದ ವ್ಯಾಪ್ತಿಯ ಪೊಲೀಸ್ ಠಾಣೆಯಿಂದ ಪ್ರಥಮ ವರ್ತಮಾನ ವರದಿ (FIR) ದಾಖಲಾಗಿರುವ ಮತ್ತು ಸಕ್ಷಮ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಮೊಕದ್ದಮೆಗಳ ಅಧಿಕೃತ ದಾಖಲೆಗಳನ್ನು ಪಡೆದು ಪರಿಶೀಲಿಸುವುದು.

(iii) ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅರ್ಹ ಅವಲಂಬಿತ ಸದಸ್ಯರು ರಸ್ತೆ ಅಪಘಾತಗಳನ್ನೊಳಗೊಂಡಂತೆ ವೈದ್ಯ-ಕಾನೂನು (Medico-legal) ಪ್ರಕರಣಗಳಲ್ಲಿ ಪಡೆದ ವೈದ್ಯಕೀಯ ಚಿಕಿತ್ಸೆಗಳ ವೆಚ್ಚವನ್ನು ಮರುಪಾವತಿಸುವಂತೆ ಕೋರಿ ಕ್ಲೇಮುಗಳನ್ನು ಸಲ್ಲಿಸುವಾಗ, 1963ರ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ಅರ್ಜಿ

ನಮೂನೆಗಳು ಹಾಗೂ Essentiality Certificate ಹಾಗೂ ದಿನಾಂಕ: 02.04.2014ರ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 1 ಎಸ್‌ಎಂಆರ್ 2014ರ ಅನುಬಂಧದ ಚೆಕ್ ಲಿಸ್ಟ್‌ನಲ್ಲಿ ನಿಗದಿಪಡಿಸಿರುವ ದಾಖಲೆಗಳನ್ನು ಹಾಗೂ ಇದರೊಂದಿಗೆ ಅನುಬಂಧದಲ್ಲಿ ಲಗತ್ತಿಸಿರುವ ನಮೂನೆ/ಸ್ವಯಂ ಘೋಷಣೆ (self-declaration) ಯಲ್ಲಿ ಹೆಚ್ಚುವರಿ ಮಾಹಿತಿ ಪಡೆಯುವುದು.

**B. <u>ವೈದ್ಯಕೀಯ ಮುಂಗಡ:</u>**

(i) ಪ್ರಸ್ತುತ ಜಾರಿಯಲ್ಲಿರುವ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 9 ಟಿಎಫ್‌ಪಿ (1) ದಿನಾಂಕ: 12.01.2010 ಮತ್ತು ಆಇ 9 ಟಿಎಫ್‌ಪಿ (2) ದಿನಾಂಕ: 21.01.2010 ರಲ್ಲಿ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯಂತೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ನಿರ್ದೇಶನಾಲಯದ ದಿನಾಂಕ: 17.03.2010ರ ಸುತ್ತೋಲೆ ಸಂಖ್ಯೆ:ಎಂಡಿಎ/ಸನಿ(ವೈ)/41/09-10 ರಂತೆ, ಸರ್ಕಾರಿ ಆಸ್ಪತ್ರೆಗಳು ಹಾಗೂ ಸರ್ಕಾರದ ಮಾನ್ಯತೆ ಹೊಂದಿರುವ ಆಸ್ಪತ್ರೆಗಳಲ್ಲಿ (Empanelled hospitals)ಗಳಲ್ಲಿ ಪಡೆಯುವ ಚಿಕಿತ್ಸೆಗೆ ಆಸ್ಪತ್ರೆಗಳು ನೀಡುವ ಅಂದಾಜು ಪಟ್ಟಿಯ ಚಿಕಿತ್ಸಾ ವಿಧಾನಗಳಿಗೆ 1963ರ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳನ್ವಯ ಪೂರ್ವ ಪರಿಷ್ಕೃತ CGHS ದರದನ್ವಯ (2014 ದರದಂತೆ) ಅರ್ಹತಾ ಮೊತ್ತದ ಶೇಕಡ 80 ರಷ್ಟು ಮೊತ್ತವನ್ನು ಅಂತಿಮ ಬಿಲ್ಲಿನಲ್ಲಿ ಮರುಹೊಂದಾಣಿಕೆ ಮಾಡುವ ಷರತ್ತಿಗೊಳಪಟ್ಟು, ವೈದ್ಯಕೀಯ ಮುಂಗಡವನ್ನು ಮಂಜೂರು ಮಾಡಬಹುದಾಗಿದೆ.

(ii) ಸರ್ಕಾರದ ಮಾನ್ಯತೆ ಹೊಂದಿರದ ಆಸ್ಪತ್ರೆಗಳಲ್ಲಿ (Non-empanelled hospitals) ಪಡೆಯುವ ಚಿಕಿತ್ಸೆಗೆ ಮುಂಗಡವನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

**C. ಸರ್ಕಾರದಿಂದ ಪಡೆದಿರುವ ವೈದ್ಯಕೀಯ ವೆಚ್ಚವನ್ನು ಹಿಂದಿರುಗಿಸುವುದು:**

(i) ರಸ್ತೆ ಅಪಘಾತಗಳನ್ನೊಳಗೊಂಡಂತೆ ವೈದ್ಯ-ಕಾನೂನು (Medico-legal) ಪ್ರಕರಣಗಳ ಸಂಬಂಧ ಸಕ್ಷಮ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಮೊಕದ್ದಮೆಗಳಲ್ಲಿ, ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿನನ್ವಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಅರ್ಹ ಸದಸ್ಯರು ವೈದ್ಯಕೀಯ ವೆಚ್ಚ/ ಪರಿಹಾರವನ್ನು ಸಂಬಂಧಪಟ್ಟ ವಿಮಾ ಸಂಸ್ಥೆ/ಇತರೆ ಸಂಸ್ಥೆ / ಸಂಬಂಧಪಟ್ಟ ವ್ಯಕ್ತಿಗಳಿಂದ ಪಡೆದಲ್ಲಿ, ಸರ್ಕಾರದಿಂದ 1963ರ ಕರ್ನಾಟಕ ಸರ್ಕಾರಿ ನೌಕರರ

(ವೈದ್ಯಕೀಯ ಹಾಜರಾತಿ) ನಿಯಮಗಳನ್ವಯ ಪಡೆದಿರುವ ವೈದ್ಯಕೀಯ ವೆಚ್ಚದ ಮರುಪಾವತಿ ಮೊತ್ತವನ್ನು ಸರ್ಕಾರಕ್ಕೆ ಹಿಂದಿರುಗಿಸತಕ್ಕದ್ದು.

(ii) ರಸ್ತೆ ಅಪಘಾತ ಅಥವಾ ಇತರೆ ವೈದ್ಯ-ಕಾನೂನು (Medico-Legal) ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಮಾ ಸಂಸ್ಥೆ, ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿ (MACT), ನ್ಯಾಯಾಲಯ ಅಥವಾ ಇತರೆ ಯಾವುದೇ ಮೂಲದಿಂದ ವೈದ್ಯಕೀಯ ವೆಚ್ಚದ ಪರಿಹಾರವನ್ನು ಪಡೆದಿರುವ / ಪಡೆಯಲಿರುವ ಬಗ್ಗೆ ಅರ್ಜಿದಾರರು ಸ್ವಯಂ-ಘೋಷಣೆಯನ್ನು (Self Declaration) ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

(iii) ಸರ್ಕಾರಕ್ಕೆ/ಸಕ್ಷಮ ಪ್ರಾಧಿಕಾರಕ್ಕೆ ಸುಳ್ಳು ಮಾಹಿತಿ ನೀಡಿ, ಎರಡು ಮೂಲಗಳಿಂದ ವೈದ್ಯಕೀಯ ವೆಚ್ಚ /ಪರಿಹಾರ ಪಡೆದಲ್ಲಿ ಅಂತಹ ಸರ್ಕಾರಿ ನೌಕರರ ವಿರುದ್ಧ ನಿಯಮಗಳನ್ವಯ ಶಿಸ್ತು ಕ್ರಮವನ್ನು ಜರುಗಿಸಲಾಗುವುದು.

(ಎಸ್.ಆರ್. ಶಿವಶಂಕರ್ )
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-3).

ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 150 ಎಸ್ಎಂಆರ್ 2021, ದಿನಾಂಕ: 21.07.2026ಕ್ಕೆ

**ಅನುಬಂಧ**

**ರಸ್ತೆ ಅಪಘಾತಗಳು / ವೈದ್ಯ- ಕಾನೂನು ಪ್ರಕರಣಗಳಲ್ಲಿ ಪಡೆದಿರುವ ವೈದ್ಯಕೀಯ ಚಿಕಿತ್ಸೆಯ ಅರ್ಜಿ ನಮೂನೆ**

**APPLICATION FORMAT IN CASE OF MEDICAL TREATMENT TAKEN IN ROAD TRAFFIC ACCIDENTS / MEDICO LEGAL CASES**

| Sl.No. | Details |
|---|---|
| 1. | FIR No./ Charge sheet No. and Date |
| 2. | Under which Section of Law |
| 3. | Name of the Police Station |
| 4. | Date, Time, Place of the accident / Medico legal case |
| 5. | Details of accident/ Medico legal case |
| 6. | Nature of injuries |
| 7. | Name of the Hospital/ Hospitals where the injured is treated |
| 8. | Period of treatment |
| 9. | Whether treatment continuing |
| 10. | Whether the injured got reimbursement of medical expenses from any other source or under a health insurance policy. Details, if available including amount of reimbursement. |
| 11. | Whether the injured was provided cashless treatment by the insurance Company? Give details, if available. |
| 12. | Details of Accident Insurance if any. |
| 13. | Any other relevant information |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



## <u>ಉದ್ಯೋಗಿಯಿಂದ ಸ್ವಯಂ ಘೋಷಣೆ ಮತ್ತು ಒಪ್ಪಿಗೆ :</u>

ಮೇಲೆ ನೀಡಲಾದ ಮಾಹಿತಿಯು ನಿಜವೆಂದು ನಾನು ನಿಷ್ಠೆಪೂರ್ವಕವಾಗಿ ಘೋಷಿಸುತ್ತೇನೆ ಮತ್ತು ಈ ಪ್ರಕರಣದಲ್ಲಿ ಸರ್ಕಾರವು ಭರಿಸುವ ಚಿಕಿತ್ಸಾ ವೆಚ್ಚವನ್ನು ನಾನು ಬೇರೆ ಯಾವುದೇ ಮೂಲದಿಂದ ಪರಿಹಾರ ಇತ್ಯಾದಿಗಳ ಮೂಲಕ ಸ್ವೀಕರಿಸಿದರೆ ಮರುಪಾವತಿಸುತ್ತೇನೆ ಎಂದು ಘೋಷಿಸುತ್ತೇನೆ ಮತ್ತು ನಾನು ಈ ಮೊತ್ತವನ್ನು ಮರುಪಾವತಿಸಲು ವಿಫಲವಾದರೆ ನನ್ನ ಸಂಬಳ/ಪಿಂಚಣಿ/ಪಿಂಚಣಿ ಸೌಲಭ್ಯಗಳು ಇತ್ಯಾದಿಗಳಿಂದ ಕಡಿತಗೊಳಿಸಲು ಸಹ ನಾನು ಒಪ್ಪುತ್ತೇನೆ. ಈ ಪ್ರಕರಣದಲ್ಲಿನ ಬೆಳವಣಿಗೆಗಳನ್ನು ಕಾಲಕಾಲಕ್ಕೆ ಸರ್ಕಾರಕ್ಕೆ ಇಂದೀಕರಿಸುತ್ತೇನೆ ಎಂದು ಸಹ ನಾನು ಘೋಷಿಸುತ್ತೇನೆ.

ದಿನಾಂಕ:
ಸ್ಥಳ: ನೌಕರರ ಹೆಸರು ಮತ್ತು ಸಹಿ

## <u>SELF DECLARATION AND UNDERTAKING BY EMPLOYEE:</u>

I solemly declare that the information provided above is true and I declare that I will repay the cost of treatment borne by Government in this case if I am in receipt of payment by way of compensation, etc. from any other source and I also agree to deduct the said amount from my salary/ pension/ pensionary benefits, etc. if I fail to repay the said amount. I also declare that I will update the developments in this case to the Government from time to time.

Date:
Place: NAME & SIGNATURE OF THE EMPLOYEE

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU
Digitally signed by P S BASAVARAJU
DN: c=IN, o=Centre for e-Governance, 2.5.4.20=5a92775953e06196db55a8e9436c5ce46372fb04852626c1953468548e18163f, ou=Department of Printing Stationery and Publications,CID - 7113982, postalCode=560001, st=Karnataka, serialNumber=b7429a87a8e44802386702411c902124eb854aec60c6b3a22d9da33f77076720, cn=P S BASAVARAJU
Date: 2026.07.22 17:38:03 +05'30'